# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 317 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಟಿ. ಎನ್. ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಪಿ.ಎಲ್ ಪಡಿತರದಾರರಿಗೆ ಹೆಚ್ಚುವರಿಯಾಗಿ ನೀಡುತ್ತಿದ್ದ 5 ಕೆ.ಜಿ ಅಕ್ಕಿಯನ್ನು ನಿಲ್ಲಿಸಿ ಎಷ್ಟು ತಿಂಗಳುಗಳಾಗಿವೆ; ಇದರಿಂದ ಸರ್ಕಾರಕ್ಕೆ ಉಳಿತಾಯವಾಗಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಆನಾಸ 199 ಡಿಆರ್‌ಎ 2023 ದಿನಾಂಕ: 19.02.2025 ರನ್ವಯ ಪ್ರಸ್ತುತ ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ (AAY) ಮತ್ತು ಆದ್ಯತಾ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (DBT) ಮುಖಾಂತರ ಹಣವನ್ನು ವರ್ಗಾಯಿಸುವ ಪ್ರಕ್ರಿಯೆಯ ಬದಲಾಗಿ ಫೆಬ್ರವರಿ 2025 ರ ಮಾಹೆಯಿಂದ ಅರ್ಹ ಪ್ರತಿ ಫಲಾನುಭವಿಗೆ 05 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ವಿತರಿಸಲಾಗುತ್ತಿದೆ. |
| ಆ | ಅನ್ನಭಾಗ್ಯ ಯೋಜನೆಯಡಿ ಬಿ.ಪಿ.ಎಲ್ ಪಡಿತದಾರರಿಗೆ ಹೆಚ್ಚುವರಿಯಾಗಿ ನೀಡುತ್ತಿದ್ದ 5 ಕೆ.ಜಿ ಅಕ್ಕಿ ಬದಲು ತೊಗರಿಬೇಳೆ, ಎಣ್ಣೆ, ಉಪ್ಪು, ಸಕ್ಕರೆ ಒಳಗೊಂಡ ಇಂದಿರಾ ಆಹಾರ ಕಿಟ್ ನೀಡಲು ಸರ್ಕಾರ ತೀರ್ಮಾನ ಮಾಡಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ವಿವರ ನೀಡುವುದು; | ಸರ್ಕಾರದ ಆದೇಶ ಸಂಖ್ಯೆ ಇ-ಆನಾಸ 158 ಡಿಆರ್‌ಎ 2025 (ಭಾ-4) ದಿನಾಂಕ:24.12.2025 ರನ್ವಯ ರಾಜ್ಯ ಸರ್ಕಾರದ ವತಿಯಿಂದ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿ ಬದಲಾಗಿ ಪ್ರತಿ ಪಡಿತರ ಚೀಟಿಗೆ ತೊಗರಿ ಬೇಳೆ, ಅಡುಗೆ ಎಣ್ಣೆ, ಸಕ್ಕರೆ, ಉಪ್ಪು ಒಳಗೊಂಡ ಇಂದಿರಾ ಆಹಾರ ಕಿಟ್(ಪೌಷ್ಠಿಕಾಂಶ ಕಿಟ್)ನ್ನು ಪಡಿತರ ಫಲಾನುಭವಿಗಳಿಗೆ ವಿತರಿಸಲು ಆದೇಶವಾಗಿರುತ್ತದೆ.<br><br>ಇಂದಿರಾ ಆಹಾರ ಕಿಟ್ ಪಡಿತರ ಪದಾರ್ಥಗಳ ಖರೀದಿ ಕಾರ್ಯವನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಇ | ಹೆಚ್ಚುವರಿಯಾಗಿ ನೀಡುತ್ತಿದ್ದ ಅಕ್ಕಿಯ ಬದಲು ಬಿ.ಪಿ.ಎಲ್ ಪಡಿತದಾರರ ಖಾತೆಗೆ ಡಿಬಿಟಿ ಮೂಲಕ ಇಲ್ಲಿಯ ತನಕ ಎಷ್ಟು ಹಣ ಜಮೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಜುಲೈ 2023 ರಿಂದ ಡಿಸೆಂಬರ್ 2024 ರವರೆಗೆ ಒಟ್ಟು 72,02,33,970 ಫಲಾನುಭವಿಗಳಿಗೆ ಒಟ್ಟು 11,567.30 ಕೋಟಿಗಳನ್ನು ಡಿಬಿಟಿ ಮೂಲಕ ವರ್ಗಾಯಿಸಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ. |
| ಈ | ಬಿ.ಪಿ.ಎಲ್ ಪಡಿತರ ಕಾರ್ಡ್ ಪಡೆಯಲು ನಿಗಧಿಪಡಿಸಿದ 1.20 ಲಕ್ಷ ವಾರ್ಷಿಕ ವರಮಾನದ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ಆಡಳಿತ ಸುಧಾರಣಾ ಆಯೋಗವು ಆದ್ಯತಾ ಪಡಿತರ ಚೀಟಿಗಳನ್ನು ಪ್ರಸ್ತುತ 2017 ರಲ್ಲಿ ಸರ್ಕಾರ ನಿಗಧಿಪಡಿಸಿರುವ ರೂ.1.20 ಲಕ್ಷಗಳ ಆದಾಯದ ಮಿತಿಯನ್ನು ಪರಿಷ್ಕರಿಸಿ ರೂ.3.00 ಲಕ್ಷಗಳಿಗೆ ಹೆಚ್ಚಿಸಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ ಸರ್ಕಾರದ ಹಂತದಲ್ಲಿ ಈ ಕುರಿತು ಹಲವಾರು ಸಭೆಗಳನ್ನು ಜರುಗಿಸಿ ಪ್ರಸ್ತುತ ಇರುವ ರೂ. 1.20 ಲಕ್ಷಗಳ ಆದಾಯ ಮಿತಿಯನ್ನು ರೂ. 3.00 ಲಕ್ಷಗಳಿಗೆ ಹೆಚ್ಚಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. |

ಇ-ಆನಾಸ 250 ಡಿಆರ್ಎ 2026

(ರಿಜ್ವಾನ್ ಅರ್ಷದ್)
ಆಹಾರ, ನಾಗರಿಕ ಸರಬರಾಜು, ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಸಚಿವರು

ಅನುಬಂಧ-01

| Districtwise Annabhagya DBT from Jul-2023 to Dec-2024 | | | | | |
|---|---|---|---|---|---|
| Sl. | District | Total Ration Card Count | Total Beneficiary Count | Total DBT Amount transferred (Rs. in Cr.) | DBT Amount Received by Beneficiaries (Rs. in Cr.) |
| 1 | BAGALKOTE | 65,47,527 | 2,40,05,234 | 391.24 | 386.68 |
| 2 | BALLARI | 47,47,954 | 1,81,15,029 | 299.19 | 293.55 |
| 3 | BELAGAVI | 1,82,00,730 | 6,19,10,398 | 1,025.49 | 1,018.76 |
| 4 | BENGALURU RURAL | 36,68,899 | 1,29,41,380 | 213.57 | 249.61 |
| 5 | BENGALURU URBAN | 1,56,38,044 | 5,51,29,404 | 927.13 | 863.00 |
| 6 | BIDAR | 54,41,014 | 2,04,46,006 | 333.73 | 325.31 |
| 7 | CHAMARAJANAGARA | 46,06,311 | 1,43,99,515 | 230.21 | 225.87 |
| 8 | CHIKKABALLAPURA | 49,21,359 | 1,68,15,589 | 272.75 | 265.35 |
| 9 | CHIKKAMAGALURU | 43,01,431 | 1,41,91,276 | 231.55 | 225.58 |
| 10 | CHITRADURGA | 64,82,978 | 2,30,15,212 | 371.95 | 365.38 |
| 11 | DAKSHINA KANNADA | 46,04,094 | 1,91,33,023 | 320.61 | 311.50 |
| 12 | DAVANAGERE | 60,24,436 | 2,16,47,644 | 347.89 | 340.14 |
| 13 | DHARWAR | 61,30,256 | 2,19,29,506 | 360.63 | 351.44 |
| 14 | GADAG | 39,68,621 | 1,34,21,829 | 216.82 | 210.31 |
| 15 | HASSAN | 75,05,972 | 2,51,47,916 | 416.76 | 406.99 |
| 16 | HAVERI | 62,79,378 | 2,29,83,242 | 370.17 | 358.45 |
| 17 | KALABURAGI | 88,30,371 | 3,19,44,312 | 521.64 | 511.01 |
| 18 | KODAGU | 16,97,114 | 53,93,451 | 88.67 | 86.35 |
| 19 | KOLAR | 54,13,833 | 1,96,89,954 | 323.06 | 317.19 |
| 20 | KOPPAL | 52,33,372 | 1,95,90,715 | 320.10 | 313.04 |
| 21 | MANDYA | 78,87,671 | 2,63,32,108 | 432.28 | 421.66 |
| 22 | MYSURU | 1,17,06,810 | 3,83,32,820 | 626.70 | 611.51 |
| 23 | RAICHUR | 69,53,264 | 2,48,94,301 | 405.68 | 396.68 |
| 24 | RAMANAGARA | 47,68,119 | 1,57,89,527 | 260.48 | 253.76 |
| 25 | SHIVAMOGGA | 63,61,825 | 2,23,13,246 | 360.53 | 353.11 |
| 26 | TUMAKURU | 1,07,77,902 | 3,73,19,341 | 613.63 | 601.78 |
| 27 | UDUPI | 31,87,410 | 1,37,40,534 | 228.55 | 223.15 |
| 28 | UTTARA KANNADA | 50,41,632 | 1,82,18,377 | 303.07 | 294.13 |
| 29 | VIJAYANAGARA | 46,63,452 | 1,77,21,831 | 286.18 | 280.73 |
| 30 | VIJAYAPURA | 77,55,545 | 2,77,03,991 | 458.07 | 448.00 |
| 31 | YADGIR | 40,95,418 | 1,60,17,259 | 262.86 | 257.29 |
| | **Total** | **20,34,42,742** | **72,02,33,970** | **11,821.18** | **11,567.30** |